ಇ) ಮುಲ್ಕಿ ಕೈಗಾರಿಕಾ ಕೇಂದ್ರದಲ್ಲಿ ರಸ್ತೆ ವಿದ್ಯುಚ್ಛಕ್ತಿ ಲೈನ್ ಮತ್ತು ನೀರು ಸರಬರಾಜಿನ ವ್ಯವಸ್ಥೆಗಳನ್ನು ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯವರು ಈಗಾಗಲೇ ಕೈಗೊಂಡಿರುತ್ತಾರೆ. ದಿನಾಂಕ 1-10-90 ರಿಂದ ವಲಯ-2ಕ್ಕೆ ಅನ್ವಯವಾಗುವ ರೂ.15.00 ಲಕ್ಷಗಳಿಗೆ ಮೀರದಂತೆ ಬಂಡವಾಳ ಹೂಡಿಕೆ ಘಟಕಗಳಿಗೆ ಶೇ 15ರಷ್ಟು ಸಹಾಯಧನ, 3 ವರ್ಷಗಳವರೆಗೆ ಮಾರಾಟ ವಿನಾಯಿತಿ ಮತ್ತು ಸ್ಟ್ಯಾಂಪ್ ಶುಲ್ಕ ವಿನಾಯಿತಿ ಹಾಗೂ ಇತರೆ ಸೌಲಭ್ಯಗಳನ್ನು ನೀಡಲಾಗುತ್ತಿದೆ.

**ಕಾವೇರಿ ನೀರಿನ ಹಂಚಿಕೆ**

15 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ತಮಿಳುನಾಡಿಗೆ ಕಾವೇರಿ ನೀರು ಕೊಟು ನಮ್ಮ ರಾಜ್ಯಕ್ಕೆ ಆಲ್ಲಿಂದ ವಿದ್ಯುಚ್ಛಕ್ತಿ ಪಡೆದುಕೊಳ್ಳುವ ಬಗ್ಗೆ ನಮ್ಮ ಸರ್ಕಾರದವರು ತಮಿಳುನಾಡು ಸರ್ಕಾರದವರೊಡನೆ ಇತ್ತೀಚೆಗೆ ಕರಾರು ಮಾಡಿಕೊಂಡಿದ್ದಾರೆಯೇ?*

*ಆ) ಹಾಗಿದ್ದಲ್ಲಿ ಈ ಕರಾರಿನ ವಿವರಗಳೇನು?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

**ಡಿ. ದೇವರಾಜ ಅರಸು ನಾಲೆಗೆ ಬೇಸಿಗೆಯಲ್ಲಿ ಒದಗಿಸುವ ನೀರಿನ ಪ್ರಮಾಣ;**

1107 - ಶ್ರೀ ಎಂ. ತಮ್ಮಣ್ಣ (ಕೆರೆಗೂಡು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?;

*ಅ) ಡಿ. ದೇವರಾಜ ಅರಸು ನಾಲೆಗೆ ಬೇಸಿಗೆ ನೀರಾವರಿ ಕಾರ್ಯಕ್ರಮ ಇದೆಯೇ?*

*ಆ) ಹಾಗಿದ್ದಲ್ಲಿ ಆ ನಾಲೆಗೆ ಒದಗಿಸುವ ನೀರಿನ ಪ್ರಮಾಣವೆಷು?*

*ಇ) ಡಿ. ದೇವರಾಜ ಅರಸು ನಾಲೆಗೆ ನೀರು ಬಿಟ್ಟ ನಂತರ ಕೃಷ್ಣರಾಜಸಾಗರ ಜಲಾಶಯದ ಆಚ್ಚುಕಟ್ಟು ಪ್ರದೇಶಕ್ಕೆ ಒದಗಿಸುವ ನೀರಿನ ಪ್ರಮಾಣದಲ್ಲಿ ವ್ಯತ್ಯಾಸವಾಗುವುದಿಲ್ಲವೇ?*

*ಈ) ಕೃಷ್ಣ ರಾಜಸಾಗರದ ವಿ.ಸಿ.ನಾಲೆ ಶಿಂಷಾ ನಾಲೆ ಆಧುನೀಕರಣ ಮತ್ತು ಸಂಪರ್ಕನಾಲೆ 90-91ನೇ ಸಾಲಿಗೆ ಎಷು ಹಣವನ್ನು ಒದಗಿಸಲಾಗಿದೆ?*

*ಉ) ಈ ಯೋಜನೆ ಮುಗಿಸಲು ಎಷ್ಟು ವರ್ಷಗಳು ಬೇಕಾಗುತ್ತದೆ?*

*ಊ) ಈ ಆಧುನೀಕರಣ ಯೋಜನೆಯಿಂದ ವಿಶ್ವೇಶ್ವರಯ್ಯ ನಾಲಾ ಆಚ್ಚುಕಟ್ಟು ಪ್ರದೇಶಕ್ಕೆ ಎಷು ಹಿಡುವರಿ ನೀರು ಸಿಗುತ್ತದೆ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಇಲ್ಲ.

ಈ) 1990-91ನೇ ಸಾಲಿನಲ್ಲಿ ಆಯವ್ಯಯದ ಪ್ರಕಾರ ಕೃಷ್ಣರಾಜಸಾಗರ ಆಧುನೀಕರಣಕ್ಕೆ ಮಾತ್ರ 100.00 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ.

ಉ) ಈ ಯೋಜನೆಯನ್ನು 9ನೇ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ಮುಗಿಸುವ ಸಾಧ್ಯತೆ ಇದೆ.

ಊ) ಸುಮಾರು 667 ಕ್ಯೂಸೆಕ್‌ಗಳಷ್ಟು ಹೆಚ್ಚುವರಿ ನೀರನ್ನು ಹಾಯಿಸಬಹುದು.

**ಕೃಷ್ಣರಾಜಸಾಗರದ ಜಲಾಶಯದ ನೀರಾವರಿ ಬಗ್ಗೆ**

1106 - ಶ್ರೀ ಎನ್. ತಮ್ಮಣ್ಣ (ಕೆರೆಗೂಡು) - ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕೃಷ್ಣರಾಜಸಾಗರದ ಜಲಾಶಯ ಕಾಲುವೆಗಳು ಮತ್ತು ಅದರ ಕೆಳಭಾಗದಲ್ಲಿರುವ ನದಿ ಕಾಲುವೆಗಳಿಗೆ ಈಗ ಜಲಾಶಯದ ಸಂಗ್ರಹಣೆಯಿಂದ ಮುಂಗಾರು ಮತ್ತು ಹಿಂಗಾರು ಬೆಳೆಗೆ ಒದಗಿಸುತ್ತಿರುವ ನೀರಿನ ಪ್ರಮಾಣವೆಷ್ಟು;*

*ಆ) ಕೃಷ್ಣರಾಜಸಾಗರದ ಜಲಾಶಯದಲ್ಲಿ ಮುಂಗಾರು ಮತ್ತು ಹಿಂಗಾರು ಬೆಳೆಗಳಿಗೆ ನೀರು ಕೊಟ್ಟ ನಂತರ ಡಿಸೆಂಬರ್ ಅಥವಾ ಜನವರಿ ಮೊದಲನೇ ವಾರದಲ್ಲಿ ಕಟ್ಟೆಯಲ್ಲಿ ಉಳಿಯುವ ನೀರಿನ ಪ್ರಮಾಣವೆಷ್ಟು?*

*ಇ) ಜನವರಿ ಮೊದಲನೇ ವಾರದಲ್ಲಿ ಜಲಾಶಯದಲ್ಲಿ ಉಳಿಯುವ ನೀರಿನ ಪ್ರಮಾಣದಲ್ಲಿ ಬೇಸಿಗೆ ಸಮಯದಲ್ಲಿ ಕೃಷ್ಣರಾಜಸಾಗರದ ಜಲಾಶಯದ ಅಚ್ಚುಕಟ್ಟು ಪ್ರದೇಶಕ್ಕೆ ಮಾಮೂಲು ನೀರು ಸರಬರಾಜಾಗುವುದೇ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಕಾವೇರಿ ನೀರಿನ ವಿವಾದವು ನ್ಯಾಯಮಂಡಳಿ ಮುಂದೆ ಇರುವುದರಿಂದ ಈ ಪ್ರಶ್ನೆಗಳಿಗೆ ಮಾಹಿತಿ ಕೊಡುವುದು ಸೂಕ್ತವಲ್ಲ.

ಇ) ಹೌದು.

**ಸಣ್ಣ ಉಳಿತಾಯ ಯೋಜನೆಯಲ್ಲಿ ಸಂಗ್ರಹಿಸಿರುವ ಹಣ**

236 - ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) - ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಸಣ್ಣ ಉಳಿತಾಯ ಯೋಜನೆ ಕಾರ್ಯಕ್ರಮದಡಿಯಲ್ಲಿ ಕಳೆದ ಮೂರು ವರ್ಷದಿಂದ ಸಂಗ್ರಹಿಸಲಾಗಿರುವ ಹಣವೆಷ್ಟು?; (ವರ್ಷವಾರು ವಿವರವನ್ನು ಕೊಡುವುದು)*

*ಆ) ಸಣ್ಣ ಉಳಿತಾಯದ ಆಂದೋಲನಕ್ಕೆ ಹಾಕಿಕೊಂಡಿರುವ ಕಾರ್ಯಕ್ರಮಗಳೇನು?*

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):

ಅ) ನಿಗದಿಮಾಡಿದ ಗುರಿ ಸಾಧಿಸಲಾದ ಪ್ರಗತಿ

| ವರ್ಷ | ಗುರಿ | | ಪ್ರಗತಿ (ರೂ. ಕೋಟಿಗಳಲ್ಲಿ) | |
|---|---|---|---|---|
| | ಒಟ್ಟು | ನಿವ್ವಳ | ಒಟ್ಟು | ನಿವ್ವಳ |
| 1987-88 | 600.00 | 355.00 | 603.03 | 257.18 |
| 1988-89 | 700.00 | 350.00 | 732.83 | 305.58 |
| 1989-90 | 700.00 | 350.00 | 972.69 | 469.59 |

ಆ)

1) ವಿವಿಧ ವಿನಿಮಯೋಗಗಳ ಬಹುಮಾನ ಯೋಜನೆ.
2) ಅಧಿಕೃತ ಏಜೆಂಟರುಗಳ ಸ್ಪರ್ಧಾ ಯೋಜನೆ.
3) ಸಂಘ ಸಂಸ್ಥೆಗಳಿಗೆ ಪ್ರೋತ್ಸಾಹಕ ಬಹುಮಾನ ಯೋಜನೆ.
4) ವಿಶೇಷ ಸಣ್ಣ ಉಳಿತಾಯ ಆಂದೋಲನ.